ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp 34-38.
©*IIMRD*, Mysuru

IIMRD JOURNALS

www.iimrd.com

# ಸವದತ್ತಿ ತಾಲೂಕಿನ ಜೈನ ಧರ್ಮ

**ರಮಜಾನಸಾಬ. ಪಿ. ನದಾಫ**
ಮುಖ್ಯಸ್ಥರು, ಇತಿಹಾಸ ವಿಭಾಗ, ಶ್ರೀ.ಕೆ.ಹೆಚ್.ಪಾಟೀಲ, ಸರಕಾರಿ ಪ್ರಥಮ ದರ್ಜೆ ಕಾಲೇಜು,
ಹುಲಕೋಟಿ, ತಾ। ಜಿ। ಗದಗ.

## ಸಾರಾಂಶ (Abstract)

*ಒಂದು ಪ್ರದೇಶದ ಇತಿಹಾಸವನ್ನು ತಿಳಿದುಕೊಳ್ಳುವಾಗ ಆ ಪ್ರದೇಶದಲ್ಲಿ ಯಾವ ಧರ್ಮ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅಲ್ಲದೆ ಯಾವ ಮನತೆತನದ ರಾಜ ಮಹಾರಾಜರು ಆ ಪ್ರದೇಶದಲ್ಲಿ ಆಳ್ವಿಕೆಯನ್ನು ಮಾಡಿದರು ಯಾವ ಧರ್ಮವನ್ನು ಪೋಷಿಸಿಕೊಂಡು ಬಂದರು ಎಂಬುದು ಸಹ ಅಷ್ಟೇ ಪ್ರಮುಖವಾಗಿದೆ ಈ ಹಿನ್ನೆಲೆಯಲ್ಲಿ ಸವತ್ತಿ ತಾಲೂಕಿನಲ್ಲಿ ಜೈನ ಧರ್ಮ ಎಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು ಎಂಬುದನ್ನು ತಿಳಿಸುವುದೇ ಈ ಲೇಖನದ ಸಾರಾಂಶವಾಗಿದೆ.*

**ಮುಖ್ಯಪದಗಳು (Keywords):** *ಸುಗಂಧವರ್ತಿ, ನಿವರ್ತನ, ಮಂಗಲರಾಜ, ಯಾಪನೀಯ ಸಂಘ, ಲಜ್ಜೆಯಬ್ಬರಸಿ,* ಸಾಮಂತರು.

### ಪೀಠಿಕೆ

ಬೆಳಗಾವಿ ಜಿಲ್ಲೆಯ ಪ್ರಮುಖ ಹತ್ತು ತಾಲೂಕುಗಳಲ್ಲಿ ಸವದತ್ತಿ ತಾಲೂಕು ಸಹ ಒಂದು. ಹಿಂದೆ ಇದು ಇತಿಹಾಸ ಕಾಲದಲ್ಲಿ ಕುಹೂಂಡಿ–3000ದ ಭಾಗವಾಗಿ ಕದಂಬರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಯರು, ಸಾಮಂತ ಅರಸರಾದ ರಟ್ಟರು, ಹೊಯ್ಸಳರು, ಹಾಗೂ ವಿಜಯನಗರದ ಅರಸರ ಆಳ್ವಿಕೆ ಒಳಪಟ್ಟಿತ್ತೆಂದು ಈ ಪ್ರದೇಶದ ಶಾಸನಗಳು ದೃಢಪಡಿಸುತ್ತವೆ.

ಸವದತ್ತಿ ಎಂಬ ಹೆಸರು "ಸುಗಂಧವರ್ತಿ" ಎಂಬ ಶಬ್ದದಿಂದ ಬಂದಿರಬಹುದೆಂದು ಊಹಿಸಲಾಗಿದೆ. ಇದನ್ನು ಪುಷ್ಟೀಕರಿಸುವಂತೆ ಕ್ರಿ.ಶ.980ರ ಕಲ್ಯಾಣ ಚಾಲುಕ್ಯರ ಅರಸನಾದ ಎರಡನೇ ತೈಲಪನ ಶಾಸನವು "ಬಲಿ ಭಟ್ಟಾರಕರ ಕಾಲಂ ಕಚ್ಚಿ ಶಾನ್ತಿವರ್ಮರಸಂ ಸುಗನ್ದವರ್ತಿಯಲ್ ತನ್ನ ಮಾಡಿಸಿದ ಬಸದಿ ಗಾವೂರ ತನ್ನ ಸೀವಟದ ಪೊಲದೊ" ಎಂದು ಉಲ್ಲೇಖಿಸಿದೆ. ಅಲ್ಲದೆ ಸ್ಥಳೀಯರ ಪ್ರಕಾರ ಸವದತ್ತಿಯ ಯಲ್ಲಮ್ಮನ ಗುಡ್ಡದಲ್ಲಿ ಕೆಲವು ಕಡೆ ಸಣ್ಣ–ಸಣ್ಣ ವರ್ತಿ(ಚಿಕ್ಕ ನೀರಿನ ಹೊಂಡ ಇದರಲ್ಲಿ ಸದಾ ನೀರು ಜಿನುಗುತ್ತಿರುತ್ತದೆ)ಗಳಿದ್ದು, ಅವುಗಳಲ್ಲಿ ಒಳ್ಳೆಯ ಸುವಾಸನೆಯುಳ್ಳ ನೀರು ಸದಾಕಾಲ

*Please cite this article as: ರಮಜಾನಸಾಬ ಪಿ ನದಾಫ. (2022). ಸವದತ್ತಿ ತಾಲೂಕಿನ ಜೈನ ಧರ್ಮ. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 34–38.*

ಬರುವುದರಿಂದ ಸುಗನ್ದವರ್ತಿ ಎಂಬ ಹೆಸರು ಇದ್ದಿರಬಹುದೆಂದು ಹೇಳುತ್ತಾರೆ. ಇದರಲ್ಲದೆ ಕೆಲವರು ಈ ಭಾಗದಲ್ಲಿ ಜೈನ ಧರ್ಮ ಹೆಚ್ಚು ಪ್ರಚಲಿತದಲ್ಲಿತ್ತು. ಹೀಗಾಗಿ ಇಲ್ಲಿನ ಶ್ರವಣರಿಗೆ ದತ್ತಿ ಕೊಟ್ಟಿದ್ದಕ್ಕಾಗಿ ಇದು ಶ್ರವಣದತ್ತಿಯಾಗಿ ಬರ–ಬರುತ್ತ ಸವದತ್ತಿಯಾಯಿತೆಂದೂ ಹೇಳುತ್ತಾರೆ. ಇದುವರೆಗೆ ಸವದತ್ತಿ ತಾಲೂಕಿನಲ್ಲಿ ಸುಮಾರು 50ಕ್ಕೂ ಹೆಚ್ಚು ಶಾಸನಗಳು ದೊರೆತಿದ್ದು, ಅವುಗಳಲ್ಲಿ ಬಹುಪಾಲು ಶಾಸನಗಳು ಶೈವ ಧರ್ಮಕ್ಕೆ ಸಂಬಂಧಿಸಿದ್ದಾಗಿವೆ. ಆದರೆ ಸುಧೀರ್ಘವಾಗಿ ಈ ಪ್ರದೇಶವನ್ನು ಸಾಮಂತರಾಗಿ ಆಳಿದ ರಟ್ಟರು ಜೈನ ಧರ್ಮೀಯರಾಗಿದ್ದರೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಜೈನ ಶಾಸನಗಳು ಲಭ್ಯವಾಗದೇ ಇರುವುದು ವಿಷಾದದ ಸಂಗತಿ.

ಸವದತ್ತಿ ತಾಲೂಕಿನಲ್ಲಿ ದೊರೆತ ಪ್ರಥಮ ಜೈನ ಶಾಸನವೆಂದರೆ ಕ್ರಿ.ಶ.5ನೇ ಶತಮಾನದ ಮಂಗಲರಾಜನ ತಾಮ್ರ ಶಾಸನ. ಇದರಲ್ಲಿ ಮಂಗಲರಾಜನ ಆಳ್ವಿಕೆಯಲ್ಲಿ ಸೇಂದ್ರಕ ಮನೆತನದ ಕನ್ನಶಕ್ತಿಯ ಮಗನಾದ ರವಿಶಕ್ತಿಯು ಕಿರುವಟ್ಟ ಕೆರೆಯ ಶಾಂತನಾಥ ಬಸದಿಗೆ 50 ನಿವರ್ತನ ಭೂಮಿಯನ್ನು ಜಿನಾಲಯದ ಪೂಜೆ–ಪುನಸ್ಕಾರಕ್ಕೆ ದಾನ ನೀಡಿದನು. ಈ ದಾನವನ್ನು ಪರಲೂರ ಸಂಘದ ಶ್ರೀನಂದಿಯ ಶಿಷ್ಯ ಅಭಯನಂದಿಯು ಸ್ವೀಕರಿಸಿದನೆಂಬ ಉಲ್ಲೇಖವಿದೆ. ಈ ಶಾಸನದ ಆಧಾರದಿಂದ ಹೂಲಿಯಲ್ಲಿ ಕ್ರಿ.ಶ.5ನೇ ಶತಮಾನದಲ್ಲಿಯೇ ಒಂದು ಜಿನಾಲಯವಿತ್ತು ಹಾಗೂ ಜೈನ ಧರ್ಮ ಪ್ರಚಲಿತದಲ್ಲಿತ್ತೆಂಬುದು ತಿಳಿದುಬರುತ್ತದೆ.

ಸವದತ್ತಿಯ ಬಸ್ತಿಗುಡಿಯಲ್ಲಿ ನಿಲ್ಲಿಸಿರುವ ಕಲ್ಲಿನ ಶಾಸನವು ರಾಷ್ಟ್ರಕೂಟರ ಎರಡನೇ ಕೃಷ್ಣನ ಆಳ್ವಿಕೆಯಲ್ಲಿ ರಟ್ಟಮನೆತನಕ್ಕೆ ಸೇರಿದ ಮೇರದನ ಮಗ ಮಹಾಸಾಮಂತನಾದ ಪೃಥ್ವಿರಾಮನು ಸ್ವತಃ ತಾನೇ ಕಟ್ಟಿಸಿದ ಜಿನೇಂದ್ರ ಭವನಕ್ಕೆ 18 ನಿವರ್ತನ ಭೂಮಿಯನ್ನು ದಾನವಾಗಿ ನೀಡಿದನು. ಅಲ್ಲದೆ ಈ ದಾನವು ಮೈಳಾಪತೀರ್ಥ ಮತ್ತು ಕಾರೇಯಗಣದ ಮೂಭಟ್ಟನ ಶಿಷ್ಯ ಗುಣಕೀರ್ತಿ ಮುನೀಶ್ವರ ಅವರ ಶಿಷ್ಯ ಇಂದ್ರಕೀರ್ತಿಸ್ವಾಮಿನ್ ಎಂಬುವವರಿಗೆ ಸಲ್ಲುತ್ತದೆ. ಮುಂದೆ ಕನ್ನ ಎಂಬುವವನು ಸುಗಂಧವರ್ತಿ–12ರ ನಾಡೊಳಗಣ ಮುಳಗುಂದದ ಸೀಮೆಯಲ್ಲಿ 6 ನಿವರ್ತನ ಭೂಮಿಯನ್ನು ಈ ಬಸದಿಗೆ ದಾನವಾಗಿ ಬಿಡುತ್ತಾನೆ. ತದನಂತರ ಕಾರ್ತವೀರ್ಯ ಮತ್ತು ಅವನ ಪತ್ನಿ ಭಾಗಲಾಂಬಿಕಾ ಅವರು ಸೂರ್ಯಗ್ರಹಣದ ನಿಮಿತ್ತ ಹಿಂದೆ ಪೃಥ್ವರಾಮ ಕೊಟ್ಟಿದ್ದ ದಾನವನ್ನು ಪುನರುಜ್ಜೀವನಗೊಳಿಸುತ್ತಾರೆಂದು ಉಲ್ಲೇಖಿಸಿದೆ.

ಬಸ್ತಿ ಗುಡಿಯಲ್ಲಿ ನಿಲ್ಲಿಸಿರುವ ಮತ್ತೊಂದು ಶಿಲಾಫಲಕವು ಕ್ರಿ.ಶ.980ನೇ ಶತಮಾನದ್ದಾಗಿದ್ದು, ಇದರಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಎರಡನೇ ತೈಲಪದೇವನು ಆಳುತ್ತಿರುವಾಗ ಅವನ ಪಾದ ಪದ್ಮೋಪಜೀವಿಯಾಗಿ ರಟ್ಟಮನೆತನದ ಶಾಂತಿವರ್ಮರಸನು ಆಳ್ವಿಕೆ ನಡೆಸುತ್ತಿರುವ ಸಂದರ್ಭದಲ್ಲಿ ಶಾಂತಿವರ್ಮರಸನು ಸುಗಂಧವರ್ತಿಯಲ್ಲಿ ಬಸದಿಯೊಂದನ್ನು ಕಟ್ಟಿಸಿ ಅದಕ್ಕೆ ದತ್ತಿಯನ್ನು ಬಿಡುತ್ತಾನೆ. ಈ ಬಸದಿಯು ರಟ್ಟರ ಪಟ್ಟಜಿನಾಲಯವಾಗಿತ್ತು. ಅಲ್ಲದೆ ಈ ಶಾಸನವು ಯಾಪನೀಯ ಸಂಘದ ಕಣ್ದೂರಗಣದ ಶ್ರೀ ಪ್ರಭಾಚಂದ್ರದೇವ, ಬಾಹುಬಲಿ ಭಟ್ಟಾರಕ ಹಾಗೂ ಶುಭಚಂದ್ರಸಿನ್ದಾನ್ತದೇವರನ್ನು ಹೆಸರಿಸುತ್ತದೆ.

ಹೂಲಿಯ ವೀರಭದ್ರ ದೇವಾಲಯದ ಬಳಿಯಿರುವ 1043ರ ಶಾಸನವು ಕಲ್ಯಾಣ ಚಾಲುಕ್ಯ ದೊರೆ ಒಂದನೇ ಸೋಮೇಶ್ವರನ ಕಾಲದ್ದಾಗಿದ್ದು, ಇದರಲ್ಲಿ ಲಚ್ಚಿಯಬ್ಬರಸಿ(ಅಂಕರಸನ ಮಡದಿ) ಹೂಲಿಯಲ್ಲಿ

ಬಸದಿಯನ್ನು ನಿರ್ಮಿಸಿ ಅದರ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಭೂಮಿಯನ್ನು ಹಾಗೂ ಹಣವನ್ನು ಶ್ರೀ ಯಾಪನೀಯ ಸಂಘದ ಪುನ್ನಾಗವೃಕ್ಷ ಮೂಲಗಣದ ಶ್ರೀ ಬಾಳಚಂದ್ರ ಭಟ್ಟಾರಕರ ಕಾಲನ್ನು ತೊಳೆದು ದಾನ ನೀಡಿದಳೆಂಬ ವಿವರವಿದೆ.

ಪ್ರಸ್ತುತ ಕೆ.ಆರ್.ಐ. ಮ್ಯೂಜಿಯಂನಲ್ಲಿರುವ ಈ ಶಾಸನವು ಸವದತ್ತಿಯಲ್ಲಿ ದೊರೆತಿದ್ದು, ಕಲ್ಯಾಣ ಚಾಲುಕ್ಯ ದೊರೆ ಎರಡನೇ ಸೋಮೇಶ್ವರನ ಕಾಲಕ್ಕೆ ಸೇರಿದ್ದಾಗಿದೆ. ಇದರಲ್ಲಿ ಮಹಾಮಂಡಳೇಶ್ವರನಾದ ಎರಡನೇ ಕಾರ್ತವೀರ್ಯನು ಸುಗಂಧವರ್ತಿಯನ್ನು ಆಳುತ್ತಿದ್ದನೆಂದು ತಿಳಿಸುವುದಲ್ಲದೆ ಕಣ್ದೂರಗಣದ ಅರ್ಹನಂದಿಯ ಬಗೆಗೆ ಪ್ರಸ್ತಾಪಿಸುತ್ತದೆ.

ಕ್ರಿ.ಶ.1098ಕ್ಕೆ ಸೇರಿದ ಸವದತ್ತಿಯ ಅನಂತನಾಥ ದಿಗಂಬರ ಜೈನ ಬಸದಿಯ ಬಲಭಾಗದಲ್ಲಿರುವ ಶಾಸನವು ಕಲ್ಯಾಣ ಚಾಲುಕ್ಯ ದೊರೆ ಆರನೇಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ರಟ್ಟ ಮನೆತನದ ಕಾಳಸೇನ ಎಂಬುವವನು ಸುಗಂಧವರ್ತಿ–12ರ ಕಂಪಣದಲ್ಲಿ ಕಟ್ಟಿಸಿದ ಜಿನ ಬಸದಿಗೆ ಕಾರೆಯಬಾಗು ಎಂಬ ಗ್ರಾಮದಲ್ಲಿನ ಭೂಮಿಯನ್ನು ದತ್ತಿ ನೀಡಿದನು. ರಟ್ಟ ದೊರೆಯಾದ ಮೂರನೇ ಸೇನನು ಅದೇ ಬಸದಿಗೆ ಭೂದಾನ ಮಾಡಿದನು ನಂತರ ರಟ್ಟರ ಮತ್ತೊಬ್ಬ ದೊರೆಯಾದ ಎರಡನೇ ಕನ್ನಕೈರನು ತನ್ನ ಗುರು ಕನಕ ಪ್ರಭಾಸಿದ್ಧಾಂತ ದೇವರಿಗೆ ಭೂದಾನ ಮಾಡಿದನೆಂದು ತಿಳಿಸುತ್ತದೆ. ಉಗರಗೋಳದ ಮುತಾಲಿಕ ದೇಸಾಯಿಯವರ ಮನೆಯ ಮುಂದೆ ದೊರೆತಿರುವ ಶಾಸನವು ಸಹ ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸೇರಿದ್ದು ಜೈನ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಆದರೆ ಈ ಶಾಸನವು ಸಾಕಷ್ಟು ತ್ರುಟಿತಗೊಂಡಿರುವುದರಿಂದ ಹೆಚ್ಚಿನ ಮಾಹಿತಿ ಲಭ್ಯವಾಗುವುದಿಲ್ಲ.

ಹೂಲಿಯ ಪಂಚಲಿಂಗೇಶ್ವರ ದೇವಾಲಯದ ಸಭಾಮಂಟಪದಲ್ಲಿರುವ ಮತ್ತೊಂದು ಶಾಸನವು ಆರನೇ ವಿಕ್ರಮಾದಿತ್ಯನ ಕಾಲದ್ದಾಗಿದ್ದು, ಜಿನ ಶ್ಲೋಕದೊಂದಿಗೆ ಆರಂಭವಾಗುವುದರ ಜೊತೆಗೆ ಖಂಡೂರ್ಗಣದ ಶುಭಶ್ಚಂದ್ರದೇವ, ಮುನಿದೇವ ಹಾಗೂ ಮಾಘನಂದಿಯನ್ನು ಹೆಸರಿಸುತ್ತದೆ. ಅಲ್ಲದೆ ಈ ಶಾಸನವು ಅಲ್ಲಲ್ಲಿ ತ್ರುಟಿತಗೊಂಡಿರುವುದರಿಂದ ಹೆಚ್ಚಿನ ಮಾಹಿತಿ ಅಸ್ಪಷ್ಟವಾಗಿದೆ. ಅಸುಂಡಿಯ ಸೊಮಲಿಂಗ ಅಳಗವಾಡಿಯವರ ಮನೆಯ ಪಕ್ಕದ ಬನಶಂಕರಿ ದೇವಾಲಯದಲ್ಲಿರುವ ಶಾಸನವು ಕಲ್ಯಾಣ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲನ ನಿತ್ಯ ಭೂದಾನವನ್ನು ತಿಳಿಸುವುದರೊಂದಿಗೆ ಯಾಪನೀಯ ಸಂಘದ ಮೈಳಾಪನ್ವಯದ ಮಹಾಜನರನ್ನು ವರ್ಣಿಸುತ್ತದೆ.

ಹೂಲಿಯ ವೀರಭದ್ರ ದೇವಾಲಯದ ನವರಂಗದ ಮಂಟಪದ ಗೂಡಿನಲ್ಲಿರುವ ಕ್ರಿ.ಶ.1145ರ ಶಾಸನವು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಎರಡನೇ ಜಗದೇಕಮಲ್ಲನು ಆಳುತ್ತಿರುವಾಗ ಪೆರ್ಗಡೆ ನೇಮಣ್ಣನ ಮುತ್ತವ್ವೆ ಲಚ್ಚಿಯಬ್ಬರಸಿ ಮಾಡಿಸಿದ ಬಸದಿಗೆ ಮತ್ತು ಬಸದಿಯಲ್ಲಿರುವ ಋಷಿಯರ ಆಹಾರದಾನಕ್ಕೆಂದು ಅಲ್ಲಿಯ ಆಚಾರ್ಯ ರಾಮಚಂದ್ರ ದೇವರ ಕಾಲನ್ನು ತೊಳೆದು ಪೆರ್ಗಡೆ ನೇಮಣ್ಣ ಭೂಮಿ ಹಾಗೂ ಹಣವನ್ನು ದಾನ ನೀಡಿದನೆಂದು ತಿಳಿಸುತ್ತದೆ. ಇದರಿಂದ ನಮಗೆ ಒಂದನೇ ಸೋಮೇಶ್ವರನ ಕಾಲದಲ್ಲಿ ಕ್ರಿ.ಶ.1043ರಲ್ಲಿ ಲಚ್ಚಿಯಬ್ಬರಸಿಯೇ ಹೂಲಿಯಲ್ಲಿ ಬಸದಿಯನ್ನು ನಿರ್ಮಿಸಿದ್ದಾಳೆಂದು ದೃಡಪಡುತ್ತದೆ.

ಹೂಲಿಯ ಪಂಚಲಿಂಗೇಶ್ವರ ದೇವಾಲುದ ಮೂರನೇ ಗರ್ಭಗೃಹದ ದ್ವಾರಬಂಧದಲ್ಲಿರುವ ಶಾಸನವು ಶ್ರೀ ಪ್ರಭಾಚಂದ್ರ ಸಿನ್ದಾನ್ತದೇವರ ಶಿಷ್ಯರಾದ ಬೋಸಣ್ಣನ ಮಗ ಸೋಮಯ್ಯ ಹೆಗ್ಗಡೆ, ಬಮ್ಮಯ್ಯ, ಧಾರವಾಡದ ಹತ್ತಿಯ ಮಾಳಿಸೆಟ್ಟಿ, ಬಾಳಯ್ಯ ಮತ್ತು ಸೋಮೆಯ, ದೊಡವಾಡದ ಬಸವಿಸೆಟ್ಟಿ, ಕಂಬದ ನೇಮಿಸೆಟ್ಟಿ ಮತ್ತು ಬಲ್ಲಿಸೆಟ್ಟಿ ಹಾಗೂ ಸಮಸ್ತ ಭವ್ಯ ಜನರು ಕೂಡಿಕೊಂಡು ಹೂಲಿಯ ಮಾಣಿಕ್ಯ ತೀರ್ಥದ ದ್ವಾರ ಶಾಖೆಯನ್ನು ಮಾಡಿಸಿದರು. ಈ ದ್ವಾರ ಶಾಖೆಯನ್ನು ಮಾಡಿದ ರೂವಾರಿ ಕುರುವನೂರ ರಾಜೋಜ ಎಂದು ತಿಳಿಸುತ್ತದೆ.

ಬಡ್ಲಿಯ ನಾರಾಯಣ ದೇವಾಲಯದಲ್ಲಿರುವ ಶಾಸನವು ಕ್ರಿ.ಶ.1219ಕ್ಕೆ ಸೇರಿದ್ದು, ಸವದತ್ತಿಯ ರಟ್ಟರಸನಾದ ಲಕ್ಷರಸನ ಕಾಲದ್ದಾಗಿದ್ದು, ಜೈನ ಧರ್ಮದ ಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ. ಇದರಲ್ಲಿ ಯಾಪನೀಯ ಸಂಘದ ಕಾರೆಯಗಣಕ್ಕೆ ಸೇರಿದ ಮಹಾಮಂಡಳಾಚಾರ್ಯ ಮಾಧವ ಭಟ್ಟಾರಕ, ಕೀರ್ತಿಭಟ್ಟಾರಕ, ಕನಕಪ್ರಭ ಮುಂತಾದ ಜೈನ ಮುನಿಗಳ ಉಲ್ಲೇಖವಿದ್ದು ಶಾಸನ ಅಸ್ಪಷ್ಟವಾಗಿದೆ.

ಬಡ್ಲಿಯ ಚಿದಂಬೇಶ್ವರ ದೇವಾಲಯದ ಕಂಬದಲ್ಲಿರುವ ಶಾಸನವು ಹೊಯ್ಸಳ ಕಾಲದ್ದಾಗಿದ್ದು, ಹೊಯ್ಸಳರ ದೊರೆ ಎರಡನೇ ವೀರಬಲ್ಲಾಳನ ಕಾಲದಲ್ಲಿ ಗಂಗ ಕಂದರ್ಪ ಬ್ರಹ್ಮಜಿನಾಲಯಕ್ಕೆ ಮನೆ ಹಾಗೂ ಗಾಣವನ್ನು ನೀಡಿದ ವಿಷಯವನ್ನು ಹಾಗೂ ನಾರಣ ಭಟ್ಟರ ಮಗನಾದ ಹರಿಹರ, ಕೀರ್ತಿಪಂಡಿತ, ಚಿಕ್ಕಯ್ಯ, ನಾಗಿಸೆಟ್ಟಿ, ದೂಸಿಗ ಪಾರಿಸೆಟ್ಟಿ ಮುಂತಾದವರು ಕೂಡಿಕೊಂಡು ಪೆರ್ಮಾಡಿಯ ಬಸದಿಗೆ ಭೂದಾನವನ್ನು ನೀಡಿದುದನ್ನು ತಿಳಿಸುತ್ತದೆ.

ಯಡ್ರಾಮಿಯ ಬ್ರಹ್ಮದೇವರ ಕಟ್ಟೆಯಲ್ಲಿ ಸೇರಿಸಿದ ತೃಟಿತ ಶಾಸನವು ಜೈನಾಚಾರ್ಯ ಕನಕಪ್ರಭರನ್ನು ಉಲ್ಲೇಖಿಸಿದರೆ ಸವದತ್ತಿಯ ಪಟ್ಟದಕಲ್ಲು ಓಣಿಯ ರಸ್ತೆಯ ಪಕ್ಕದಲ್ಲಿರುವ ಶಾಸನದಲ್ಲಿ ಕೇವಲ "ಯಾಪನೀಯ ಸಂಘಂ.........ಗ್ಗಣ" ಎಂಬ ಉಲ್ಲೇಖ ಮಾತ್ರವೆದೆ. ಹೀಗೆ ಸವದತ್ತಿ ತಾಲೂಕಿನಲ್ಲಿ ಕಂಡುಬರುವ ಶಾಸನಗಳನ್ನು ಗಮನಿಸಿದಾಗ ಅಲ್ಲಿ ಜೈನ ಧರ್ಮ ಹೆಚ್ಚು ಪ್ರಾಭಲ್ಯವನ್ನು ಪಡೆದುಕೊಂಡಿತ್ತೆಂಬ ಅಂಶ ತಿಳಿದುಬರುತ್ತದೆ.

ಸವದತ್ತಿ ತಾಲೂಕಿನ ಹಲವು ಗ್ರಾಮಗಳಲ್ಲಿ ಇಂದಿಗೂ ಕೆಲವೊಂದು ಜೈನ ಶಿಲ್ಪಗಳು ಲಭ್ಯವಾಗಿವೆ. ಕಡಬಿಯಲ್ಲಿ ಆದಿನಾಥ, ಕುಟಿರನಟ್ಟಿ, ತಲ್ಲೂರು, ಮುತವಾಡ ಮದನೂರುಗಳಲ್ಲಿ ಪಾರ್ಶ್ವನಾಥನ ಶಿಲ್ಪ, ಹೂಲಿಯಲ್ಲಿ ಸುಪಾರ್ಶ್ವನಾಥನ ಶಿಲ್ಪ ಸವದತ್ತಿಯಲ್ಲಿ ವೃಷಭನಾಥನ ಶಿಲ್ಪಗಳು ದೊರೆತಿವೆ. ಇವು 11–12ನೇ ಶತಮಾನಕ್ಕೆ ಸಂಬಂಧಿಸಿದ್ದಾಗಿವೆ. ಅಲ್ಲದೆ ಕೆಲವೊಂದು ಜೈನ ದೇವಾಲಯಗಳು ಬೇರೆ ಧರ್ಮದ ದೇವಾಲಯಗಳಾಗಿ ಪರಿವರ್ತಿತವಾಗಿರುವುದು ಸಹ ಸವದತ್ತಿ ತಾಲೂಕಿನಲ್ಲಿ ಕಂಡುಬರುತ್ತದೆ. ಉದಾಹರಣೆಗೆ: ಯಲ್ಲಮ್ಮನ ಗುಡ್ಡದಲ್ಲಿರುವ ಯಲ್ಲಮ್ಮ ದೇವಾಲಯ ಹಿಂದೆ ಜೈನ ದೇವಾಲಯವಾಗಿತ್ತೆಂದು, ಡಾ.ಎಂ.ಎಂ.ಕಲಬುರ್ಗಿ ಸಂಪಾದಿಸಿದ ಜನಪದ ಸಾಹಿತ್ಯ ದರ್ಶನ ಭಾಗ–2 ಪು.23ರಲ್ಲಿ ಮತ್ತು ಶ್ರೀ. ಪಿ.ಜೆ.ಕೆಂಪಣ್ಣನವರ ಸಂಪಾದಿಸಿದ ಜೈನ ಕ್ಷೇತ್ರಗಳ ಐತಿಹ್ಯ ಪು.51ರಲ್ಲಿ ತಿಳಿಸಿದ್ದಾರೆ. ಅಲ್ಲದೆ ನಾವು ಇಂದಿಗೂ ದೇವಾಯದ ಹೊರ ಗೋಡೆಯಲ್ಲಿರುವ ಸ್ತಂಭ ಪಂಜರದ ಶಿಖರದ ಸಣ್ಣ ಗೂಡಿನಲ್ಲಿ ಯೋಗಾಸನದಲ್ಲಿ ಕುಳಿತ ತೀರ್ಥಂಕರನ ಉಬ್ಬು ಶಿಲ್ಪವನ್ನು ಕಾಣಬಹುದು. ಹೂಲಿಯ ಪಂಚಲಿಂಗೇಶ್ವರ ದೇವಾಲಯವು

ಮೂಲತಹ ಜೈನ ಬಸದಿಯಾಗಿತೆಂಬುದು ಇಲ್ಲಿ ದೊರೆಯುವ ಶಾಸನಗಳಿಂದ ಮತ್ತು ಗರ್ಭಗೃಹದ ಲಲಾಟಬಿಂಬದಲ್ಲಿರುವ ಭಗ್ನಗೊಂಡ ತೀರ್ಥಂಕರರ ಉಬ್ಬು ಶಿಲ್ಪಗಳಿಂದ ತಿಳಿದುಬರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಸವದತ್ತಿ ತಾಲೂಕಿನಲ್ಲಿ ದೊರೆತಿರುವ ಸುಮಾರು 11 ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಈ ಪ್ರದೇಶದಲ್ಲಿನ ಜೈನ ಧರ್ಮವನ್ನು ಇಲ್ಲಿ ಅವಲೋಕಿಸಲಾಗಿದ್ದು, ಸವದತ್ತಿ ತಾಲೂಕಿನ ಶಾಸನಗಳನ್ನು, ಸಾಹಿತ್ಯ ಕೃತಿಗಳನ್ನು ಗಮನಿಸಿದಾಗ ಜೈನ ಧರ್ಮವು ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಗೋಪಾಲ್.ಆರ್. (2010). ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ  ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ಭಾರತಿ. ಬಿ.ಆರ್. (2011). ರಾಷ್ಟ್ರಕೂಟರ ಶಾಸನಗಳು ಸಂಪುಟ–1, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
- ಮಹಾಂತೇಶ. ಮ. ಅಕ್ಕಿ. (2001). ಸವದತ್ತಿ ಪ್ರದೇಶದ ಕಲೆ ಮತ್ತು ವಾಸ್ತು ಶಿಲ್ಪ (ಅಪ್ರಕಟಿತ ಎಂ.ಫಿಲ್ ಪ್ರಭಂದ). ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ನಾಗಯ್ಯ. ಜೆ.ಎಂ. (2011). ಕಲ್ಯಾಣ ಚಾಲುಕ್ಯರ ಶಾಸನಗಳು ಸಂಪುಟ–1, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
- Gopal.B.R. (1969). Karnatak Inscriptions Series Vol.V – Kannada Research Institute, KUD. Panchamukhi.R.S. (1941). Karnatak Inscriptions Series, Vol.I– Kannada Research Institute, KUD.Dharwad.
- Gopal.B.R. (1973). Karnatak Inscriptions Series Vol.VI– Kannada Research Institute, KUD. Dharwad.
- Lakshminarayan Rao.N. (1975). South Indian Inscription Vol. XVIII, New Delhi.
- Gai.G.S. (1988). South Indian Inscription Vol. XX, New Delhi.
- Panchamukhi.R.S. (1941). Karnatak Inscriptions Series, Vol.I– Kannada Research Institute, KUD. Dharwad.